ಆರ್‌ಬಿಐ/2007–08/40 **ಜುಲೈ 2, 2007**

ಡಿಬಿಓಡಿ.ಸಂ.ಡಿಐಆರ್.ಬಿಸಿ.6/13.03.00/2007–08

ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು (ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ)

ಮಾನ್ಯರೇ,

ಪ್ರಧಾನ ಸುತ್ತೋಲೆ – ಮುಂಗಡಗಳ ಮೇಲಿನ ಬಡ್ಡಿದರಗಳು

ಮುಂಗಡಗಳ ಮೇಲಿನ ಬಡ್ಡಿದರಗಳ ವಿಷಯಕ್ಕೆ ಸಂಬಂಧಪಟ್ಟಂತೆ, ಜುಲೈ 30, 2006 ರವರೆಗೆ ಬ್ಯಾಂಕುಗಳಿಗೆ ನೀಡಲಾದ ಸೂಚನೆ/ಮಾರ್ಗಸೂಚಿಗಳನ್ನು ಕ್ರೋಢೀಕರಿಸಿರುವ ಜುಲೈ 1, 2006 ರ ಡಿಬಿಓಡಿ.ಸಂ.ಡಿಐಆರ್.ಬಿಸಿ. 5/13.03.00/2006–07 ಸುತ್ತೋಲೆಯನ್ನು ದಯವಿಟ್ಟು ಗಮನಿಸಿ. ಈ ಪ್ರಧಾನ ಸುತ್ತೋಲೆಯಲ್ಲಿ, ದಿನಾಂಕ ಜುಲೈ 30, 2007 ರ ತನಕ ನೀಡಲಾದ ಸೂಚನೆಗಳನ್ನು ಅಳವಡಿಸುವ ಮೂಲಕ ಸೂಕ್ತವಾಗಿ ಪರಿಷ್ಕರಿಸಿದೆ ಮತ್ತು ಬ್ಯಾಂಕಿನ ವೆಬ್‌ತಾಣ (http://www.rbi.org.in) ದಲ್ಲಿಯೂ ಪ್ರದರ್ಶಿಸಲಾಗಿದೆ.

ತಮ್ಮ ವಿಶ್ವಾಸಿ

ಸಹಿ/
(ಪಿ. ವಿಜಯಭಾಸ್ಕರ್)
ಮುಖ್ಯ ಮಹಾವ್ಯವಸ್ಥಾಪಕರು

ಪ್ರಧಾನ ಸುತ್ತೋಲೆ – ಮುಂಗಡಗಳ ಮೇಲಿನ ಬಡ್ಡಿದರಗಳು

ಉದ್ದೇಶ

ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮುಂಗಡಗಳ ಮೇಲಿನ ಬಡ್ಡಿದರಗಳ ಬಗ್ಗೆ ನೀಡಲ್ಪಟ್ಟ ನಿರ್ದೇಶನಗಳನ್ನು ಕ್ರೋಢೀಕರಿಸುವುದು.

ವರ್ಗೀಕರಣ

1949ರ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯ 21 ಮತ್ತು 35 ಎ ವಿಭಾಗಗಳಿಂದ ದತ್ತವಾದ ಅಧಿಕಾರ ಉಪಯೋಗಿಸಿ ರಿಸರ್ವ್ ಬ್ಯಾಂಕು ನೀಡಿದ ಶಾಸನಬದ್ಧ ನಿರ್ದೇಶನಗಳು.

ಕ್ರೋಢೀಕೃತ ಹಿಂದಿನ ನಿರ್ದೇಶನಗಳು

ಅನುಬಂಧ 3 ರಲ್ಲಿ ಪಟ್ಟಿ ಮಾಡಿದ ಸುತ್ತೋಲೆಗಳನ್ನು ಒಳಗೊಂಡ ವಿಷಯದ ಮೇಲಿನ ಸೂಚನೆಗಳನ್ನು, ಈ ಸುತ್ತೋಲೆಯು ಕ್ರೋಢೀಕರಿಸುತ್ತದೆ.

ಕಾರ್ಯವ್ಯಾಪ್ತಿಯ ವಿವರ

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ, ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ.

ಸಂರಚನೆ

1. ಪೀಠಿಕೆ
2. ಮಾರ್ಗಸೂಚಿಗಳು
    - 2.1 ಸಾಮಾನ್ಯ
    - 2.2 ಪ್ರಧಾನ ನೀಡಿಕೆ ದರ ಮಾನದಂಡ (ಬಿಪಿಎಲ್ಆರ್) ಮತ್ತು ವ್ಯಾಪ್ತಿ
    - 2.3 ಪ್ರಧಾನ ನೀಡಿಕೆ ದರ ಮಾನದಂಡದ ನಿರ್ಧಾರ
    - 2.4 ಸಾಲ ನೀಡಿಕೆ ದರಗಳನ್ನು ನಿಗದಿಗೊಳಿಸುವ ಸ್ವಾತಂತ್ರ್ಯ
    - 2.5 ಸಾಲಗಳ ಮೇಲೆ ಚರ ಬಡ್ಡಿದರಗಳು
    - 2.6 ದಂಡ ಬಡ್ಡಿದರಗಳನ್ನು ವಿಧಿಸುವುದು
    - 2.7 ಸಾಲದ ಒಪ್ಪಂದದಲ್ಲಿ ಬಡ್ಡಿದರ ನಿಗದಿ ಅಧಿಕಾರ
    - 2.8 ತೀರುವಳಿಯಾಗದ ಮೊತ್ತದ ಹಿಂತೆಗೆತ
    - 2.9 ತಾತ್ಕಾಲಿಕ ಒಕ್ಕೂಟ ವ್ಯವಸ್ಥೆಯಡಿಯಲ್ಲಿ ಸಾಲಗಳು
    - 2.10 ಮಾಸಿಕ ಅಧಾರದಲ್ಲಿ ಬಡ್ಡಿ ವಿಧಿಸುವುದು
    - 2.11 ಬಹುಕಾಲ ಬಾಳಿಕೆ ವಸ್ತುಗಳಿಗೆ ಪ್ರತಿಶತ ಶೂನ್ಯ ಬಡ್ಡಿ ಹಣಕಾಸು ಯೋಜನೆಗಳು
    - 2.12 ಬ್ಯಾಂಕುಗಳು ಹೆಚ್ಚುವರಿ ಬಡ್ಡಿ ವಿಧಿಸುವುದು
3. ಅನುಬಂಧ

ಪ್ರಧಾನ ಸುತ್ತೋಲೆ – ಮುಂಗಡಗಳ ಮೇಲಿನ ಬಡ್ಡಿದರಗಳು

1. ಪೀಠಿಕೆ

1.1 ಭಾರತೀಯ ರಿಸರ್ವ್ ಬ್ಯಾಂಕು, ಅಕ್ಟೋಬರ್ 1, 1960ರಿಂದ ಅನ್ವಯವಾಗುವಂತೆ, ಅನುಸೂಚಿತ ವಾಣಿಜ್ಯ ಬ್ಯಾಂಕುಗಳು ಮಂಜೂರುಮಾಡುವ ಮುಂಗಡಗಳ ಮೇಲಿನ ಕನಿಷ್ಟ ಬಡ್ಡಿದರವನ್ನು ಗೊತ್ತುಪಡಿಸಲು ಆರಂಭಿಸಿತು. ಮಾರ್ಚ್ 2, 1968ರಿಂದ ಅನ್ವಯವಾಗುವಂತೆ ಬ್ಯಾಂಕುಗಳು ವಿಧಿಸಬಹುದಾದ ಕನಿಷ್ಟ ಸಾಲ ನೀಡಿಕೆ ದರದ ಬದಲಾಗಿ ಗರಿಷ್ಠ ಸಾಲ ನೀಡಿಕೆಯ ದರವನ್ನು ಪರಿಚಯಿಸಲಾಯಿತು. ಕನಿಷ್ಟ ಸಾಲ ನೀಡಿಕೆದರ ಸೂಚಿಸುವುದನ್ನು ಪುನಃ ಜಾರಿಗೊಳಿಸಿದಾಗ, ಗರಿಷ್ಠ ನೀಡಿಕೆಯ ದರವನ್ನು ಜನವರಿ 21, 1970ರಿಂದ ಅನ್ವಯವಾಗುವಂತೆ ಹಿಂದಕ್ಕೆ ಪಡೆಯಲಾಯಿತು. ಮಾರ್ಚ್ 15, 1976ಕ್ಕೆ ಅನ್ವಯವಾಗುವಂತೆ ಪುನಃ ಬ್ಯಾಂಕುಗಳು ಮುಂಗಡಗಳ ಮೇಲೆ ವಿಧಿಸಬಹುದಾದ ದರದ ಮಿತಿಯನ್ನು ಜಾರಿಗೊಳಿಸಲಾಯಿತು ಮತ್ತು ಬ್ಯಾಂಕುಗಳಿಗೆ ಮುಂಗಡಗಳ ಮೇಲೆ ನಿಯತಕಾಲಿಕವಾಗಿ – ತ್ರೈಮಾಸಿಕ ಅಧಾರದ ಮೇಲೆ ಬಡ್ಡಿ ವಿಧಿಸುವ ಸೂಚನೆಯನ್ನೂ ಮೊದಲ ಬಾರಿಗೆ ನೀಡಲಾಯಿತು. ನಂತರದ ಅವಧಿಯಲ್ಲಿ, ವಿವಿಧ ವಲಯ–ನಿಗದಿತ, ಯೋಜನಾ–ನಿಗದಿತ ಮತ್ತು ಉದ್ದೇಶ–ನಿಗದಿತ ಬಡ್ಡಿಯ ದರಗಳನ್ನು ಜಾರಿಗೆ ತರಲಾಯಿತು.

1.2 ಉಲ್ಲೇಖಿಸಲ್ಪಟ್ಟ ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಸಾಲ ನೀಡಿಕೆ ದರಗಳ ಪ್ರಸಕ್ತ ಸ್ವರೂಪವು ಕಾಲಾನುಕ್ರಮದಲ್ಲಿ ಮಿತಿಮೀರಿದ ಬಡ್ಡಿಯ ಏರಿಕೆಯ ಲಕ್ಷಣಗಳು ಪ್ರಕಟವಾಗಲು ಕಾರಣವಾದ್ದರಿಂದ, ಸೆಪ್ಟೆಂಬರ್ 1990ರಲ್ಲಿ, ಸಾಲದ ಮೊತ್ತಕ್ಕೆ ತತ್ಸಂಬಂಧವಾದ ಸಾಲ ನೀಡಿಕೆ ದರದ ಹೊಸ ಸ್ವರೂಪವನ್ನು ಗೊತ್ತುಪಡಿಸಲಾಯಿತು. ಇದು ಬಡ್ಡಿದರಗಳ ವೈವಿಧ್ಯತೆ ಹಾಗೂ ಸಂಕೀರ್ಣತೆಯನ್ನು ಗಣನೀಯವಾಗಿ ಕಡಿಮೆ ಮಾಡಿತು. ವಿಭಿನ್ನ ಬಡ್ಡಿದರದ ಯೋಜನೆಯಡಿಯಲ್ಲಿ ಶೇಕಡ 4 ರ ವಾರ್ಷಿಕ ದರದಲ್ಲಿ ಪೂರೈಸಿದ ಸಾಲಗಳು ಮತ್ತು ರಫ್ತು ಸಾಲಗಳ ಪ್ರಕರಣಗಳಲ್ಲಿ, ಸಾಲದರ, ಸಹಾಯಧನ ಪೂರಕಗಳೊಂದಿಗೆ, ಪ್ರತ್ಯೇಕವಾದ ವಿಭಿನ್ನ ಸಾಲದರಗಳ ಅನ್ವಯಿಸುವಿಕೆಗೆ ಒಳಪಟ್ಟು, ಈಗಿನ ಸಾಲದರ ಸ್ವರೂಪವನ್ನು ಮುಂದುವರಿಸಲಾಯಿತು.

1.3 ಬಡ್ಡಿದರಗಳ ನಿರ್ವಹಿಸುವಿಕೆಯಲ್ಲಿ ಅಂತರ್ಗತವಾದ ಆರ್ಥಿಕ ಅಡೆತಡೆ ನಿವಾರಿಸುವುದನ್ನು ಖಾತರಿ ಮಾಡಿಕೊಳ್ಳುವುದು ಆರ್ಥಿಕ ವಲಯದ ಸುಧಾರಣೆಯ ಗುರಿಯಾಗಿದೆ. ಹಾಗೆಯೇ, ಬ್ಯಾಂಕುಗಳಿಗೆ ಹೆಚ್ಚಿನ ಕಾರ್ಯನಿರ್ವಹಣಾ ಸ್ವಾಯತ್ತತೆ ನೀಡುವ ದಿಸೆಯಲ್ಲಿ, ಅಕ್ಟೋಬರ್ 18, 1994ರಿಂದ ಅನ್ವಯವಾಗುವಂತೆ, ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ರೂ. 2 ಲಕ್ಷಕ್ಕೆ ಮೇಲ್ಪಟ್ಟ ಉದ್ದರಿ ಮಿತಿಗೆ ಸಂಬಂಧಿಸಿದ, ಸಾಲ ನೀಡಿಕೆಯ ದರವನ್ನು ಮುಕ್ತಗೊಳಿಸಲು ನಿರ್ಧರಿಸಲಾಯಿತು. ರೂ. 2 ಲಕ್ಷದವರೆಗಿನ ಸಾಲಗಳಿಗೆ ಸಾಲಗಾರರ ಹಿತ ಕಾಪಾಡುವ ಉದ್ದೇಶದಿಂದ, ಸಾಲ ನೀಡಿಕೆಯ ದರಗಳನ್ನು ಗೊತ್ತುಪಡಿಸಲು ನಿರ್ಧರಿಸಲಾಯಿತು. ರೂ.2 ಲಕ್ಷಕ್ಕೆ ಮೇಲ್ಪಟ್ಟ ಉದ್ದರಿ ಮಿತಿಯ ಸಾಲಗಳಿಗೆ ಕನಿಷ್ಟ ಸಾಲ ನೀಡಿಕೆಯ ದರ ಗೊತ್ತುಪಡಿಸುವುದನ್ನು ರದ್ದುಗೊಳಿಸಲಾಯಿತು ಮತ್ತು ಈ ಮಿತಿಯ ಸಾಲಗಳಿಗೆ ಸಾಲ ನೀಡಿಕೆ ದರಗಳನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನು ಬ್ಯಾಂಕುಗಳಿಗೆ ನೀಡಲಾಯಿತು. ರೂ.2 ಲಕ್ಷ ಮೇಲ್ಪಟ್ಟ ಉದ್ದರಿ ಮಿತಿಗೆ ಅಧಾರಿತ ದರವಾಗಿರುವ ಪ್ರಧಾನ ಸಾಲ ನೀಡಿಕೆ ದರ ಮಾನದಂಡ (ಬಿಪಿಎಲ್ಆರ್) ನಿರ್ಧರಿಸುವಲ್ಲಿ ಬ್ಯಾಂಕುಗಳು ಈಗ ಸಂಬಂಧಪಟ್ಟ ಮಂಡಳಿಗಳ ಒಪ್ಪಿಗೆ ಪಡೆಯುವುದು ಅಗತ್ಯವಾಗಿದೆ. ಪ್ರತಿಯೊಂದು ಬ್ಯಾಂಕೂ ತನ್ನ ಪ್ರಧಾನ ಸಾಲ ನೀಡಿಕೆ ಮಾನದಂಡವನ್ನು ಘೋಷಣೆಮಾಡಬೇಕು ಮತ್ತು ಎಲ್ಲಾ ಶಾಖೆಗಳಿಗೂ ಸಮನಾಗಿ ಅನ್ವಯಿಸುವಂತೆ ನೋಡಿಕೊಳ್ಳಬೇಕು.

2. ಮಾರ್ಗಸೂಚಿಗಳು

2.1 ಸಾಮಾನ್ಯ

2.1.1 ಸಾಲಗಳಿಗೆ / ಮುಂಗಡಗಳಿಗೆ / ನಗದು ಉದ್ದರಿಗಳಿಗೆ / ತಮ್ಮಿಂದ ಮಂಜೂರು ಮಾಡಲ್ಪಟ್ಟ / ಒದಗಿಸಲ್ಪಟ್ಟ / ನವೀಕರಿಸಲ್ಪಟ್ಟ ಓವರ್‌ಡ್ರಾಫ್ಟ್ ಅಥವಾ ಇತರ ಯಾವುದೇ ಹಣಕಾಸು ಸೌಲಭ್ಯ ನೀಡುವಿಕೆಗೆ ಅಥವಾ ಸಾವಧಿ (ಯುಸಾನ್ಸ್) ಬಿಲ್ಲುಗಳಿಗೆ ಬ್ಯಾಂಕುಗಳು ವಿಧಿಸುವ ಬಡ್ಡಿಯು, ಭಾರತೀಯ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ಮುಂಗಡಗಳ ಮೇಲಿನ ಬಡ್ಡಿದರಗಳ ಕುರಿತು ನೀಡುವ ನಿರ್ದೇಶನಗಳಿಗೆ ಹೊಂದಿಕೆಯಾಗಿರಬೇಕು.

2.1.2 ಸೂಚಿತ ದರದಲ್ಲಿ ಬಡ್ಡಿಯನ್ನು ಮಾಸಿಕ ಅವಧಿಗೆ ವಿಧಿಸಬೇಕು (ಪ್ಯಾರಾ 2.10ರಲ್ಲಿ ನಿರೂಪಿಸಲ್ಪಟ್ಟ ನಿಬಂಧನೆಗೆ ಒಳಪಟ್ಟು) ಮತ್ತು ಸಮೀಪದ ರೂಪಾಯಿಗೆ ಪೂರ್ಣಾಂಕಿತಗೊಳಿಸಿರಬೇಕು.

2.1.3 ಸಾಲದ ಮೊತ್ತವನ್ನು ಮತ್ತು ಅನ್ವಯವಾಗುವ ಬಡ್ಡಿಯ ದರವನ್ನು ನಿರ್ಧರಿಸುವ ಉದ್ದೇಶದಿಂದ ಬ್ಯಾಂಕುಗಳು ಸಾವಧಿ ಸಾಲಗಳನ್ನು ಹಾಗೂ ದುಡಿಯುವ ಬಂಡವಾಳ ಮುಂಗಡಗಳನ್ನು ಒಟ್ಟುಗೂಡಿಸಬೇಕು.

2.1.4 ಪ್ರಸ್ತುತ ಜಾರಿಯಲ್ಲಿರುವ ನಿರ್ದೇಶನದನ್ವಯ ಬಡ್ಡಿದರಗಳ ಅನುಸೂಚಿ ಪಟ್ಟಿಯನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

2.2 ಪ್ರಧಾನ ನೀಡಿಕೆ ದರ ಮಾನದಂಡ (ಬಿಪಿಎಲ್‌ಆರ್) ಮತ್ತು ವ್ಯಾಪ್ತಿ

2.2.1 ರೂ.2 ಲಕ್ಷಕ್ಕೆ ಮೇಲ್ಪಟ್ಟ ಮುಂಗಡಗಳ ಮೇಲಿನ ಬಡ್ಡಿದರಗಳ ನಿಯಂತ್ರಣವನ್ನು, ಅಕ್ಟೋಬರ್ 18, 1994ರಿಂದ ಅನ್ವಯಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕು ಮುಕ್ತಗೊಳಿಸಿತು. ಇಂತಹ ಮುಂಗಡಗಳ ಮೇಲಿನ ಬಡ್ಡಿದರಗಳನ್ನು ಪ್ರಧಾನ ಸಾಲ ನೀಡಿಕೆ ದರದ ಮಾನದಂಡ (ಬಿಪಿಎಲ್‌ಆರ್) ಮತ್ತು ವ್ಯಾಪ್ತಿಯ ಮಾರ್ಗಸೂಚಿಗಳಿಗೆ ಒಳಪಟ್ಟು, ಬ್ಯಾಂಕುಗಳು ತಾವೇ ನಿರ್ಧರಿಸುವಂತಾಯಿತು. ರೂ.2 ಲಕ್ಷದವರೆಗಿನ ಉದ್ದರಿ ಮಿತಿಗಳಿಗೆ, ಬ್ಯಾಂಕುಗಳು ತಮ್ಮ ಬಿಪಿಎಲ್‌ಆರ್‌ಗೆ ಮೀರದಂತೆ ಬಡ್ಡಿ ವಿಧಿಸಬೇಕು. ಅಂತಾರಾಷ್ಟ್ರೀಯ ಪದ್ಧತಿ ಮತ್ತು ಸಾಲ ನೀಡಿಕೆ ದರ ನಿರ್ಧರಿಸುವಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ಕಾರ್ಯನಿರ್ವಹಣೆಯ ಹೊಂದಾಣಿಕೆ ಒದಗಿಸುವುದನ್ನು ದೃಷ್ಟಿಯಲ್ಲಿಟ್ಟುಕೊಂಡು, ಬ್ಯಾಂಕುಗಳು ರಫ್ತುದಾರರಿಗೆ ಅಥವಾ ಸಾರ್ವಜನಿಕ ಉದ್ದಿಮೆಗಳನ್ನೊಳಗೊಂಡಂತೆ ಇತರ ವಿಶ್ವಾಸಾರ್ಹ ಸಾಲಗಾರರಿಗೆ, ಸಂಬಂಧಿತ ಮಂಡಳಿಗಳಿಂದ ಅನುಮೋದಿಸಲ್ಪಟ್ಟ ಪಾರದರ್ಶಕ ಮತ್ತು ವಸ್ತುನಿಷ್ಠ ನೀತಿಯ ಅಧಾರದ ಮೇಲೆ ಬಿಪಿಎಲ್‌ಆರ್‌ಗಿಂತ ಕಡಿಮೆ ದರದಲ್ಲಿ ಸಾಲ ನೀಡಬಹುದಾಗಿದೆ. ಬ್ಯಾಂಕುಗಳು ಬಿಪಿಎಲ್‌ಆರ್‌ಗಿಂತ ಹೆಚ್ಚಿನ ಬಡ್ಡಿದರಗಳ ಗರಿಷ್ಠ ವ್ಯಾಪ್ತಿ ಘೋಷಿಸುವುದನ್ನು ಮುಂದುವರಿಸುತ್ತವೆ.

2.2.2 ಭಾರತದಲ್ಲಿ ಜಾರಿಯಲ್ಲಿರುವ ಉದ್ದರಿ ಮಾರುಕಟ್ಟೆ ಮತ್ತು ಸಣ್ಣ ಸಾಲಗಾರರ ಸಲುವಾಗಿ ರಿಯಾಯಿತಿಯನ್ನು ಮುಂದುವರಿಸುವುದರ ಅಗತ್ಯದಿಂದಾಗಿ ರೂ.2 ಲಕ್ಷದ ವರೆಗಿನ ಸಾಲಕ್ಕೆ ಬಿಪಿಎಲ್‌ಆರ್‌ನ್ನು ಮಿತಿಯೆಂದು ಪರಿಗಣಿಸುವ ಪದ್ಧತಿ ಮುಂದುವರಿಯುತ್ತದೆ.

2.2.3 ಬಿಪಿಎಲ್‌ಆರ್‌ನ್ನು ಆಧಾರವಾಗಿಟ್ಟುಕೊಳ್ಳದೇ ಮತ್ತು ಪ್ಯಾರಾ 2.4ರಲ್ಲಿ ವಿವರ ನೀಡಿದಂತೆ, ಬಹುಕಾಲ ಬಾಳಿಕೆ ಗ್ರಾಹಕ ವಸ್ತುಗಳ ಖರೀದಿಗೆ ಸಾಲಗಳು, ಷೇರು ಮತ್ತು ಡಿಬೆಂಚರ್/ಬಾಂಡುಗಳ ಮೇಲಿನ ಸಾಲಗಳು, ಇತರ ಆದ್ಯತೆಯಲ್ಲದ ವಲಯಗಳ ವೈಯ್ಯಕ್ತಿಕ ಸಾಲಗಳು, ಇವುಗಳಿಗೆ ಸಂಬಂಧಪಟ್ಟಂತೆ ಸಾಲಗಳ ಮೊತ್ತವನ್ನು ಪರಿಗಣಿಸದೇ, ಬಡ್ಡಿದರವನ್ನು ನಿರ್ಧರಿಸಲು ಬ್ಯಾಂಕುಗಳು ಸ್ವತಂತ್ರವಾಗಿವೆ.

2.2.4 ಪ್ರಧಾನ ನೀಡಿಕೆ ದರದ ಮಾನದಂಡವನ್ನು (ಬಿಪಿಎಲ್‌ಆರ್‌ನ್ನು) ಬ್ಯಾಂಕಿನ ಎಲ್ಲಾ ಶಾಖೆಗಳು ಏಕರೂಪವಾಗಿ ಅನ್ವಯಿಸುವಂತೆ ಮಾಡಬೇಕು.

2.3 ಪ್ರಧಾನ ನೀಡಿಕೆ ದರ ಮಾನದಂಡದ ನಿರ್ಧಾರ

2.3.1 ತಮ್ಮ ಸಾಲದ ಉತ್ಪಾದಕತೆಯ ಬೆಲೆ ಕಟ್ಟುವಾಗ ಪಾರದರ್ಶಕತೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ, ಅಂತೆಯೇ ಬಿಪಿಎಲ್‌ಆರ್ ನೈಜವಾಗಿ ವಾಸ್ತವಿಕ ವೆಚ್ಚಗಳನ್ನು ಪ್ರತಿಬಿಂಬಿಸುವುದನ್ನು ಖಾತರಿ ಪಡಿಸಿಕೊಳ್ಳುವುದಕ್ಕಾಗಿ, ಬ್ಯಾಂಕುಗಳು ಪ್ರಧಾನ ಸಾಲ ನೀಡಿಕೆ ದರದ ಮಾನದಂಡವನ್ನು ನಿರ್ಧರಿಸುವಾಗ ಈ ಕೆಳಗಿನ ವಿಚಾರಗಳ ಮಾರ್ಗದರ್ಶನ ಪಡೆಯಬೇಕು.

(ಎ) ಬ್ಯಾಂಕುಗಳು ಪ್ರಧಾನ ಸಾಲ ನೀಡಿಕೆ ದರದ ಮಾನದಂಡವನ್ನು ನಿರ್ಧರಿಸುವಾಗ (i) ನಿಧಿಗಳ ವಾಸ್ತವಿಕ ವೆಚ್ಚ, (ii) ಕಾರ್ಯನಿರ್ವಹಣೆಯ ಖರ್ಚುಗಳು ಮತ್ತು (iii) ಶಾಸನಬದ್ಧ ಮೀಸಲು ಅವಕಾಶಗಳ ಅಗತ್ಯದ ನಿರ್ವಹಣೆಗೆ ಕನಿಷ್ಟ ಅಂತರ/ಬಂಡವಾಳ ದರ ಮತ್ತು ಲಾಭದ ಅಂತರ, ಇವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಬ್ಯಾಂಕುಗಳು ತಮ್ಮ ಮಂಡಳಿಯ ಅನುಮತಿಯ ಮೇರೆ ಬಿಪಿಎಲ್‌ಆರ್‌ನ್ನು ಘೋಷಿಸಬೇಕು.

(ಬಿ) ಪ್ರಧಾನ ಸಾಲನೀಡಿಕೆ ದರ ಮಾನದಂಡದ ಗರಿಷ್ಠ ಮಿತಿ ರೂ.2 ಲಕ್ಷಗಳವರೆಗಿನ ಉದ್ದರಿ ಮಿತಿಗೆ, ಸೀಮಿತವಾಗಿರುತ್ತದೆ.

(ಸಿ) ಇನ್ನಿತರ ಎಲ್ಲ ಸಾಲ ನೀಡಿಕೆಯ ದರವನ್ನು ಮೇಲೆ ಹೇಳಿದ ರೀತಿಯಲ್ಲಿ ಬಿಪಿಎಲ್‌ಆರ್ ಆಧಾರದೊಂದಿಗೆ ಸಾವಧಿ ಪ್ರೀಮಿಯಮ್ ಮತ್ತು/ಅಥವಾ ಸಂಭಾವ್ಯ ನಷ್ಟ ಪ್ರೀಮಿಯಮ್‌ನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.

ಪ್ರಧಾನ ಸಾಲ ನೀಡಿಕೆ ದರ ಮಾನದಂಡದ ಕಾರ್ಯಾಚರಣೆಯ ವಿಚಾರದ ಮೇಲೆ ವಿವರವಾದ ಮಾರ್ಗಸೂಚಿಗಳನ್ನು ಭಾರತೀಯ ಬ್ಯಾಂಕುಗಳ ಸಂಘ (ಐಬಿಎ) ನವೆಂಬರ್ 25, 2003 ರಂದು ನೀಡಿದೆ.

2.3.2 ಗ್ರಾಹಕ ರಕ್ಷಣೆ ಮತ್ತು ಸಾಲಗಾರರಿಗೆ ವಿಧಿಸುವ ವಸ್ತುನಿಷ್ಠ ಬಡ್ಡಿದರಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಪ್ರಮಾಣದ ಪಾರದರ್ಶಕತೆ ಹೊಂದುವ ಉದ್ದೇಶದಿಂದ, ಬ್ಯಾಂಕುಗಳು ಪ್ರಧಾನ ಸಾಲ ನೀಡಿಕೆ ದರಗಳ ಮಾನದಂಡದ ಜೊತೆಯಲ್ಲಿಯೇ, ಗರಿಷ್ಠ ಮತ್ತು ಕನಿಷ್ಟ ಬಡ್ಡಿದರಗಳ ಮಾಹಿತಿ ಒದಗಿಸುವುದನ್ನೂ ಮುಂದುವರಿಸಬೇಕು.

2.4 ಸಾಲ ನೀಡಿಕೆ ದರಗಳನ್ನು ನಿಗದಿಗೊಳಿಸುವ ಸ್ವಾತಂತ್ರ್ಯ

2.4.1 ಬ್ಯಾಂಕುಗಳು, ಬಿಪಿಎಲ್‌ಆರ್‌ನ್ನು ಪರಿಗಣಿಸದೇ ಮತ್ತು ಈ ಕೆಳಗಿನ ಸಾಲಗಳ ಪ್ರಮಾಣ(ಮೊತ್ತ)ವನ್ನು ಗಣನೆಗೆ ತೆಗೆದುಕೊಳದೇ ಬಡ್ಡಿ ದರಗಳನ್ನು ನಿಗದಿಗೊಳಿಸಲು ಸ್ವತಂತ್ರವಾಗಿವೆ.

(i) ಬಹುಕಾಲ ಬಾಳಿಕೆ ಬರುವ ವಸ್ತುಗಳ ಖರೀದಿಗಾಗಿ ಸಾಲಗಳು;

(ii) ಷೇರುಗಳು ಮತ್ತು ಡಿಬೆಂಚರ್/ಬಾಂಡುಗಳ ಮೇಲೆ ವ್ಯಕ್ತಿಗಳಿಗೆ ಸಾಲಗಳು;

(iii) ಕ್ರೆಡಿಟ್ ಕಾರ್ಡ್ ಬಾಕಿ ಸೇರಿದಂತೆ, ಇತರ ಆದ್ಯತಾರಹಿತ ವಲಯದ ವೈಯಕ್ತಿಕ ಸಾಲಗಳು;

(iv) ಬ್ಯಾಂಕುಗಳಲ್ಲಿರುವ ದೇಶಿಯ/ಅನಿವಾಸಿ ವಿದೇಶಿ/ ಎಫ್.ಸಿ.ಎನ್.ಆರ್(ಬಿ)ಬ್ಯಾಂಕ್ ಠೇವಣಿಗಳ ಮೇಲಿನ ಮುಂಗಡಗಳು/ ಮೀರೆಳೆತ(ಓವರ್‌ಡ್ರಾಫ್ಟ್) ಸಾಲಗಾರನ

ಸ್ವಂತ/ಸಾಲಗಾರರ ಒಟ್ಟಾರೆ ಹೆಸರಿನಲ್ಲಿ/ಹೆಸರುಗಳಲ್ಲಿ ಅಥವಾ ಜಂಟಿಯಾಗಿ ಬೇರೆ ವ್ಯಕ್ತಿಯ ಜೊತೆಯಲ್ಲಿ ಸಾಲಗಾರರ ಹೆಸರುಗಳಲ್ಲಿ ಇದ್ದ ಪಕ್ಷದಲ್ಲಿ.

(v) ಹುಟ್ಟುವಳಿ ಬೆಂಬಲ(ಇನ್‌ಪುಟ್ ಸಪೋರ್ಟ್) ಒದಗಿಸುತ್ತಿರುವ ಅಂತಿಮ ಫಲಾನುಭವಿಗಳಿಗೆ ಮತ್ತು ದಲ್ಲಾಳಿಗಳಿಗೆ ಮುಂದೆ ಸಾಲನೀಡಿಕೆಯ ಸಲುವಾಗಿ, ಗೃಹ ನಿರ್ಮಾಣ ಹಣಕಾಸು ಮಧ್ಯವರ್ತಿ ದಲ್ಲಾಳಿಗಳನ್ನೂ ಒಳಗೊಂಡಂತೆ ಮಧ್ಯವರ್ತಿ ದಲ್ಲಾಳಿಗಳಿಗೆ (ಅನುಬಂಧ 2ರ ಪಟ್ಟಿ) ಹಣಕಾಸು ಮಂಜೂರು ಮಾಡಿರುವುದು;

(vi) ಹುಂಡಿಗಳ ಸೋಡಿಮಾಡುವುದು (ಬಿಲ್ ಡಿಸ್ಕೌಂಟಿಂಗ್);

(vii) ಆಯ್ದ ಉದ್ದರಿ ನಿಯಂತ್ರಣಕ್ಕೆ ಒಳಪಟ್ಟ ವಸ್ತುಗಳ ಮೇಲೆ ಸಾಲಗಳು/ಮುಂಗಡಗಳು/ನಗದು ಉದ್ದರಿ/ಓವರ್‌ಡ್ರಾಫ್ಟ್‌ಗಳು;

(viii) ಸಹಕಾರಿ ಬ್ಯಾಂಕು ಅಥವಾ ಇತರ ಯಾವುದೇ ಬ್ಯಾಂಕಿಂಗ್ ಸಂಸ್ಥೆಗೆ;

(ix) ತಮ್ಮ ಸ್ವಂತ ಉದ್ಯೋಗಿಗಳಿಗೆ;

(x) ಸಾವಧಿ ನೀಡಿಕೆ ಸಂಸ್ಥೆಗಳ ಮರುಹಣಕಾಸು ಯೋಜನೆಗಳಡಿಯಲ್ಲಿ ಬರುವ ಸಾಲಗಳು.

2.5 ಸಾಲಗಳ ಮೇಲೆ ಚರ ಬಡ್ಡಿದರಗಳು

2.5.1 ತಮ್ಮ ಸ್ವತ್ತು–ಭಾದ್ಯತೆ ನಿರ್ವಹಣೆ ಮಾರ್ಗಸೂಚಿಗಳ ದೃಢೀಕರಣಕ್ಕೆ ಒಳಪಟ್ಟು, ಬ್ಯಾಂಕುಗಳು, ಎಲ್ಲ ವರ್ಗದ ಸಾಲಗಳನ್ನು ಸ್ಥಿರ ಅಥವಾ ಚರ ದರಗಳ ಮೇಲೆ ನೀಡುವ ಸ್ವಾತಂತ್ರ್ಯ ಹೊಂದಿವೆ. ತಮ್ಮ ಸಾಲ ಹುಟ್ಟುವಳಿಗಳ ಮೇಲಿನ ಚರ ದರವನ್ನು ನಿರ್ಣಯಿಸುವಾಗ, ಬ್ಯಾಂಕುಗಳು ಪಾರದರ್ಶಕತೆಯನ್ನು ಖಾತರಿಪಡಿಸಿಕೊಳ್ಳುವ ಉದ್ದೇಶದಿಂದ, ಬಾಹ್ಯ ಅಥವಾ ಮಾರುಕಟ್ಟೆ ಅಧಾರಿತ ರೂಪಾಯಿ ಮಾನದಂಡದ ಬಡ್ಡಿ ದರಗಳನ್ನು ಮಾತ್ರ ಉಪಯೋಗಿಸಬೇಕು. ಚರ ದರಗಳನ್ನು ಲೆಕ್ಕ ಮಾಡುವ ವಿಧಾನವು ವಸ್ತುನಿಷ್ಟ, ಪಾರದರ್ಶಕ ಮತ್ತು ಪ್ರತಿಪಕ್ಷದವರು ಪರಸ್ಪರ ಒಪ್ಪುವ ರೀತಿಯಲ್ಲಿರಬೇಕು. ಬ್ಯಾಂಕುಗಳು ತಮ್ಮ ಸ್ವಂತ ಆಂತರಿಕ ಮಾನದಂಡಗಳಿಗೆ ಅಥವಾ ಅಂತರ್ಗತ ಆಧಾರಿತ ಇತರ ಯಾವುದೇ ಉದ್ಭವಿತ ದರಕ್ಕೆ ತಳಕುಹಾಕಿದ ಚರದರ ಸಾಲಗಳನ್ನು ನೀಡಬಾರದು. ಈ ವಿಧಾನವನ್ನು ಎಲ್ಲ ಹೊಸ ಸಾಲಗಳಿಗೂ ಅನ್ವಯಿಸಬೇಕು. ದೀರ್ಘಾವಧಿಯ/ನಿಶ್ಚಿತ ಖಾತೆಗಳ ಪ್ರಸಕ್ತ ಸಾಲಗಳಿಗೆ ಸಂಬಂಧಪಟ್ಟಂತೆ, ಸಾಲದ ಖಾತೆಗಳ ಪುನರ್ವಿಮರ್ಶೆ ಅಥವಾ ನವೀಕರಣದ ಸಮಯದಲ್ಲಿ ಮೇಲಿನ ವಿಧಾನದ ರೀತಿಯಲ್ಲಿ ಸಂಬಂಧಪಟ್ಟ ಸಾಲಗಾರನ/ರ ಒಪ್ಪಿಗೆ ಪಡೆದ ಮೇಲೆ ಆವರ್ತಕ ದರಗಳನ್ನು ಮರುನಿಗದಿ ಮಾಡಬೇಕು.

2.6 ದಂಡದ ಬಡ್ಡಿದರಗಳನ್ನು ವಿಧಿಸುವುದು

2.6.1 ಬ್ಯಾಂಕಿನ ಮಂಡಳಿಗಳು, ಬಿಪಿಎಲ್‌ಆರ್, ಅಂತೆಯೇ ಬಿಪಿಎಲ್‌ಆರ್‌ಗೆ ಮೇಲ್ಪಟ್ಟ ಬಡ್ಡಿದರ ನಿರ್ಧರಿಸುವ ಅಧಿಕಾರ ಹೊಂದಿರುವುದರಿಂದ ತಮ್ಮ ನಿರ್ದೇಶಕ ಮಂಡಳಿಯ ಅನುಮತಿಯೊಂದಿಗೆ ದಂಡದ ಬಡ್ಡಿ ಸಲುವಾಗಿ ಪಾರದರ್ಶಕ ನೀತಿ ನಿರೂಪಿಸಲು (ಅಕ್ಟೋಬರ್ 10, 2000 ರಿಂದ ಅನ್ವಯವಾಗುವಂತೆ) ಬ್ಯಾಂಕುಗಳಿಗೆ ಅನುಮತಿ ನೀಡಲಾಗಿದೆ. ಆದಾಗ್ಯೂ, ಆದ್ಯತಾ ವಲಯದಲ್ಲಿ ಸಾಲ ಪಡೆದ ಸಾಲಗಾರರಿಗೆ, ರೂ.25000/–ರವರೆಗಿನ ಸಾಲಗಳಿಗೆ ದಂಡದ ಬಡ್ಡಿಯನ್ನು ವಿಧಿಸತಕ್ಕದ್ದಲ್ಲ. ಮರುಪಾವತಿಯಲ್ಲಿ ಕರ್ತವ್ಯಲೋಪ ಮಾಡಿರುವಿಕೆ, ಹಣಕಾಸಿನ ಲೆಕ್ಕಪತ್ರಗಳ ವಿವರಗಳನ್ನು ಸಲ್ಲಿಸದಿರುವಿಕೆ ಮುಂತಾದ ಕಾರಣಗಳಿಗಾಗಿ ದಂಡ ಬಡ್ಡಿಯನ್ನು ವಿಧಿಸಬೇಕು. ಆದಾಗ್ಯೂ, ದಂಡದ ಬಡ್ಡಿಯ ಮೇಲಿನ ನೀತಿಯು ಪಾರದರ್ಶಕತೆ, ಔಚಿತ್ಯ, ಸಾಲಗಾರರಿಗೆ ಸೇವೆಯ ಕಾಳಜಿ ಮತ್ತು ಗ್ರಾಹಕರ ಪ್ರಾಮಾಣಿಕ ತೊಂದರೆಗಳ ಬಗ್ಗೆ ಸಹಾನುಭೂತಿ; ಇವುಗಳ ಕುರಿತಾದ ಸ್ವೀಕಾರ್ಹ ತತ್ವಗಳಿಂದ ಪ್ರಭಾವಿತವಾಗಿರಬೇಕು.

2.7 ಸಾಲದ ಒಪ್ಪಂದದಲ್ಲಿ ಬಡ್ಡಿ ದರ ನಿಗದಿ ಅಧಿಕಾರ

2.7.1 ಸಾವಧಿ ಸಾಲಗಳನ್ನೊಳಗೊಂಡಂತೆ, ಎಲ್ಲ ಮುಂಗಡಗಳಿಗೆ ಸಾಲದ ಒಪ್ಪಂದಗಳಲ್ಲಿ, ಬ್ಯಾಂಕುಗಳು ಈ ಕೆಳಗಿನ ಷರತ್ತುಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ಇದರಿಂದ, ಬ್ಯಾಂಕುಗಳಿಗೆ, ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೀಡಲ್ಪಡುವ ನಿರ್ದೇಶನಗಳಿಗೆ ಅನುಗುಣವಾಗಿ ಬಡ್ಡಿದರವನ್ನು ವಿಧಿಸಲು ಸಾಧ್ಯವಾಗುತ್ತದೆ.

"ಸಾಲಗಾರರು ಪಾವತಿಸಬೇಕಾದ ಬಡ್ಡಿಯು, ಕಾಲಕಾಲಕ್ಕೆ ರಿಸರ್ವ್ ಬ್ಯಾಂಕಿನಿಂದ ಮಾಡಲಾಗುವ ಬಡ್ಡಿ ದರದ ಬದಲಾವಣೆಗೆ ಒಳಪಟ್ಟಿರುತ್ತದೆ ".

2.7.2 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯ ವಿಭಾಗ 21 ಮತ್ತು 35ಎ ಗಳಡಿಯಲ್ಲಿ, ಸಾಲಗಳ ಮತ್ತು ಮುಂಗಡಗಳ ಬಡ್ಡಿದರಗಳ ಮೆಲಿನ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಬ್ಯಾಂಕುಗಳು ಬದ್ಧವಾಗಿರಬೇಕಾದ ಕಾರಣದಿಂದ, ಯಾವುದೇ ಬಡ್ಡಿದರಗಳ ಪರಿಷ್ಕರಣೆಗಳನ್ನು ಜಾರಿಗೆ ತರಬೇಕಾದ ನಿರ್ಬಂಧಕ್ಕೆ ಬ್ಯಾಂಕುಗಳು ಒಳಪಟ್ಟಿವೆ. ಜಾರಿಯಲ್ಲಿರುವ ಮುಂಗಡಗಳ ಮೇಲೆ ಬದಲಾದ ಬಡ್ಡಿದರಗಳು, (ಬಿಪಿಎಲ್ಆರ್ ಮತ್ತು ವ್ಯಾಪ್ತಿಯ ಬದಲಾವಣೆ) – ನಿರ್ದೇಶನಗಳಲ್ಲಿ ನಿಖರವಾಗಿ ಬೇರೇನೂ ಸ್ಪಷ್ಟಣೆಯಿರದಿದ್ದರೆ, ನಿರ್ದೇಶನಗಳು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.

2.7.3 ಪ್ಯಾರ 2.7.1 ಮತ್ತು 2.7.2 ಗಳು ಸ್ಥಿರ ದರದ ಸಾಲಗಳಿಗೆ ಅನ್ವಯಿಸುವುದಿಲ್ಲ.

2.8 ತೀರುವಳಿಯಾಗದ ಮೊತ್ತದ ಹಿಂತೆಗೆತ

2.8.1 ತೀರುವಳಿಯ ಸಲುವಾಗಿ ಕಳುಹಿಸಲ್ಪಟ್ಟ ಚೆಕ್ಕುಗಳ ಮೇಲೆ ಹಣ ಹಿಂಪಡೆಯುವುದಕ್ಕೆ ಅವಕಾಶ ಒದಗಿಸಿದಲ್ಲಿ, ಈ ತೀರುವಳಿಯಾಗದ ಮೊತ್ತದ ಹಿಂತೆಗೆತ (ಉದಾ: ತೀರುವಳಿಯಾಗದ ಸ್ಥಳೀಯ ಅಥವಾ ಹೊರ ಚೆಕ್ಕುಗಳು) ಸುರಕ್ಷಿತವಲ್ಲದ ಮುಂಗಡದ ಸ್ವರೂಪದ್ದಾಗಿದ್ದು, ಬ್ಯಾಂಕುಗಳು ಈ ರೀತಿಯ ಹಣ ಹಿಂತೆಗೆತದ ಮೇಲೆ ಮುಂಗಡಗಳ ಮೇಲಿನ ಬಡ್ಡಿ ವಿಧಿಸುವ ನಿರ್ದೇಶನಗಳಿಗೆ ಅನುಗುಣವಾಗಿಯೇ ಬಡ್ಡಿ ವಿಧಿಸಬೇಕು.

2.8.2 ಈ ಮೇಲಿನ ಸೂಚನೆಯು, ತೀರುವಳಿಗೆ ಕಳುಹಿಸಿದ ಚೆಕ್ಕುಗಳಿಗೆ ಸಂಬಂಧಪಟ್ಟಂತೆ, ಗ್ರಾಹಕರ ಸೇವೆಯ ಕ್ರಮವಾಗಿ ಠೇವಣಿದಾರರಿಗೆ ನೀಡಲಾಗುವ ತಕ್ಷಣದ ಜಮೆಗಳಿಗೆ ಅನ್ವಯಿಸುವುದಿಲ್ಲ.

2.9 ತಾತ್ಕಾಲಿಕ ಒಕ್ಕೂಟ ವ್ಯವಸ್ಥೆಯಡಿಯಲ್ಲಿ ಸಾಲಗಳು

2.9.1 ತಾತ್ಕಾಲಿಕ ಒಕ್ಕೂಟ ವ್ಯವಸ್ಥೆಯಡಿಯ ಸಾಲಗಳಿಗೂ, ಬ್ಯಾಂಕುಗಳು ಏಕರೂಪದ ಬಡ್ಡಿದರಗಳನ್ನು ವಿಧಿಸಬೇಕಾಗಿಲ್ಲ. ಪ್ರತಿ ಸದಸ್ಯ ಬ್ಯಾಂಕುಗಳು, ತನ್ನ ಬಿಪಿಎಲ್ಆರ್‌ಗೆ ಒಳಪಟ್ಟು, ಸಾಲಗಾರನಿಗೆ ವಿಸ್ತರಿಸಿದ ಉದ್ದರಿ ಮಿತಿಯ ಭಾಗಾಂಶಗಳ ಮೇಲೆ ಬಡ್ಡಿದರ ವಿಧಿಸಬೇಕು.

2.10 ಮಾಸಿಕ ಅಧಾರದಲ್ಲಿ ಬಡ್ಡಿ ವಿಧಿಸುವುದು

2.10.1 ಏಪ್ರಿಲ್ 1, 2002ರಿಂದ ಅನ್ವಯವಾಗುವಂತೆ, ಬ್ಯಾಂಕುಗಳು ಮಾಸಿಕ ಅಧಾರದಲ್ಲಿ ಬಡ್ಡಿ ವಿಧಿಸುವ ಪದ್ಧತಿಗೆ ಬದಲಾವಣೆಗೊಳ್ಳುವುದು ಅಗತ್ಯವಾಗಿತ್ತು. ಹೊಸ ಪದ್ಧತಿಗೆ ಬದಲಾವಣೆಗೊಂಡಾಗ, ಬ್ಯಾಂಕುಗಳು ಮಾಸಿಕ ಅಧಾರದಲ್ಲಿ ಬಡ್ಡಿ ವಿಧಿಸುವ/ಒಟ್ಟುಗೂಡಿಸುವ ಪದ್ಧತಿಯಿಂದಾಗಿ,

ಪರಿಣಾಮಕಾರಿ ದರ ಏರಿಕೆಯಾಗದಿರುವುದನ್ನು ಮತ್ತು ಸಾಲಗಾರರ ಮೇಲೆ ಹೊರೆ ಹೆಚ್ಚದೇ ಇರುವುದನ್ನು ಖಾತರಿಮಾಡಿಕೊಳ್ಳುವುದು ಅಗತ್ಯವಾಗಿತ್ತು.

ಉದಾಹರಣೆ ನೀಡುವುದಾದರೆ;

ಬ್ಯಾಂಕು, ಸಾಲಗಾರರ ಖಾತೆಯ ಮೇಲೆ ತ್ರೈಮಾಸಿಕ ಅಧಾರದಲ್ಲಿ ಪ್ರತಿಶತ 12ರಷ್ಟು ಬಡ್ಡಿ ವಿಧಿಸುತ್ತಿದ್ದರೆ, ಪರಿಣಾಮಕಾರಿ ದರ ಪ್ರತಿಶತ 12.55 ಆಗುತ್ತದೆ. ಇದೇ ಮೊತ್ತದ ಮೇಲೆ ಪ್ರತಿಶತ 12ರ ಬಡ್ಡಿಯನ್ನು ಮಾಸಿಕ ಅಧಾರದ ಮೇಲೆ ವಿಧಿಸಿದರೆ, ಪರಿಣಾಮಕಾರಿದರ ಪ್ರತಿಶತ 12.68ರಷ್ಟಾಗುತ್ತದೆ. ಈ ಕಾರಣದಿಂದಾಗಿ, ಬ್ಯಾಂಕುಗಳು ಸಾಲಗಾರರಿಗೆ ವಿಧಿಸುವ ಪ್ರತಿಶತ 12ರ ಬಡ್ಡಿದರಯನ್ನು, ಸಾಲಗಾರರ ಪರಿಣಾಮಕಾರಿದರ, ಮೇಲೆ ಹೇಳಿದಂತೆ ಪ್ರತಿಶತ 12.55 ಕ್ಕೆ ಮೀರದ ರೀತಿಯಲ್ಲಿ ಹೊಂದಾಣಿಕೆ ಮಾಡಬೇಕು. ಈ ಮೇಲಿನ ಉದಾಹರಣೆಯಲ್ಲಿ ಬ್ಯಾಂಕುಗಳು ಪ್ರತಿಶತ 11.88ರಷ್ಟು ಬಡ್ಡಿ ವಿಧಿಸಬೇಕು (ಪ್ರತಿಶತ 12ರ ಬದಲು). ಹೀಗೆ ಮಾಡಿದ ಪಕ್ಷದಲ್ಲಿ, ಪರಿಣಾಮಕಾರಿ ದರವು ಮಾಸಿಕ ಅಧಾರದಲ್ಲಿ ಒಟ್ಟುಗೂಡಿಸಿದರೂ, ಪ್ರತಿಶತ 12.55ರಷ್ಟು ಆಗಿರುತ್ತದೆ.

2.10.2 ಮಾಸಿಕ ಅಧಾರಿತ ಬಡ್ಡಿ ಅನ್ವಯಿಸುವಿಕೆಯನ್ನು ಚಾಲ್ತಿಯಲ್ಲಿರುವ ಎಲ್ಲಾ ಖಾತೆಗಳಿಗೆ, ಉದಾ: ನಗದು ಉದ್ದರಿ, ಓವ್‌ರ್‌ಡ್ರಾಫ್ಟ್, ರಫ್ತು ಪ್ಯಾಕಿಂಗ್ ಕ್ರೆಡಿಟ್ ಖಾತೆಗಳು ಮುಂತಾದವುಗಳಿಗೆ ಅನ್ವಯಿಸಬೇಕು. ಮಾಸಿಕ ಆಧಾರಕ್ಕೆ ಬದಲಾವಣೆ ಮಾಡುವ ಸಂದರ್ಭದಲ್ಲಿ, ಬ್ಯಾಂಕುಗಳು ದಾಖಲೆಯ ಉದ್ದೇಶಕ್ಕಾಗಿ ಸಾಲಗಾರರಿಂದ ಒಪ್ಪಿಗೆ ಪತ್ರ/ಪೂರಕ ಒಪ್ಪಂದವನ್ನು ಹೊಂದಬಹುದು.

2.10.3 ಮಾಸಿಕ ಆಧಾರಿತ ಬಡ್ಡಿಯು, ಎಲ್ಲ ಹೊಸ ಮತ್ತು ಚಾಲ್ತಿಯಲ್ಲಿರುವ ಸಾವಧಿ ಸಾಲಗಳಿಗೆ ಮತ್ತು ಇತರ ಧೀರ್ಘಾವಧಿಯ/ನಿಶ್ಚಿತ ಅವಧಿಯ ಸಾಲಗಳಿಗೆ ಅನ್ವಯಿಸುತ್ತದೆ. ಚಾಲ್ತಿಯಲ್ಲಿರುವ ಧೀರ್ಘಾವಧಿ ನಿಶ್ಚಿತಾವಧಿಯ ಸಾಲಗಳಿಗೆ ಸಂಬಂಧಪಟ್ಟಂತೆ, ಬ್ಯಾಂಕುಗಳು, ನಿಬಂಧನೆ ಮತ್ತು ಷರತ್ತುಗಳ ಪುನರ್‌ಪರಿಶೀಲನೆ ಅಥವಾ ಸಾಲದ ಖಾತೆಗಳ ನವೀಕರಣದ ಸಮಯದಲ್ಲಿ ಅಥವಾ ಸಾಲಗಾರರ ಒಪ್ಪಿಗೆ ಪಡೆದ ಮೇಲೆ, ಮಾಸಿಕ ಅಧಾರಿತ ಬಡ್ಡಿಯನ್ನು ಅನ್ವಯಿಸಲು ಮುಂದಾಗಬೇಕು.

2.10.4 ಮಾಸಿಕ ಅಧಾರಿತ ಬಡ್ಡಿ ವಿಧಿಸುವುದರ ಮೇಲಿನ ಸೂಚನೆಗಳು ಕೃಷಿ ಮುಂಗಡಗಳಿಗೆ ಅನ್ವಯಿಸುವುದಿಲ್ಲ ಮತ್ತು ಬೆಳೆಯ ಕಾಲಗಳಿಗೆ ಅನುಗುಣವಾಗಿ ನೀಡುವ ಕೃಷಿ ಮುಂಗಡಗಳಿಗೆ ವಿಧಿಸುವ/ಒಟ್ಟುಗೂಡಿಸುವ ಬಡ್ಡಿಯ ಚಾಲ್ತಿ ಪದ್ಧತಿಯನ್ನು ಬ್ಯಾಂಕುಗಳು ಮುಂದುವರಿಸಿಕೊಂಡು ಹೋಗಬೇಕು. ದಿನಾಂಕ ಜೂನ್ 29, 1998ರ ಆರ್‌ಪಿಸಿಡಿ.ಸಂ.ಪಿಎಲ್‌ಎಫ್‌ಎಸ್.ಬಿಸಿ.129/05.02.27/97–98ರ ಸುತ್ತೋಲೆಯಲ್ಲಿ ಸೂಚಿಸಿರುವಂತೆ, ಧೀರ್ಘಾವಧಿ ಬೆಳೆಯ ಕೃಷಿ ಮುಂಗಡಗಳಿಗೆ ವಾರ್ಷಿಕ ಅವಧಿಗೆ ಬಡ್ಡಿ ವಿಧಿಸಬೇಕು. ಅಲ್ಪಾವಧಿಯ ಬೆಳೆಗಳು ಮತ್ತು ಕೃಷಿ ಅಧಾರಿತ ಚಟುವಟಿಕೆಗಳಾದ ಹೈನುಗಾರಿಕೆ, ಮೀನುಗಾರಿಕೆ, ಹಂದಿಸಾಕಣೆ, ಕೋಳಿಸಾಕಣೆ, ಜೇನುಸಾಕಣೆ ಮುಂತಾದವುಗಳಿಗೆ ಸಂಬಂಧಪಟ್ಟ ಇತರ ಕೃಷಿ ಮುಂಗಡಗಳಿಗೆ, ಸಾಲ ಮತ್ತು ಕಂತುಗಳ ಅವಧಿ ಮೀರಿದ್ದರೆ, ಬ್ಯಾಂಕುಗಳು ಇವುಗಳಿಗೆ ಬಡ್ಡಿ ವಿಧಿಸುವಾಗ ಮತ್ತು ಒಟ್ಟುಗೂಡಿಸಿ ಲೆಕ್ಕಹಾಕುವಾಗ, ಸಾಲಗಾರರ ಹಣದ ಲಭ್ಯತೆ ಮತ್ತು ಸುಗ್ಗಿ/ಮಾರುಕಟ್ಟೆ ಕಾಲದ ಅಧಾರದ ಮೇಲೆ ಸಂದಾಯ ದಿನಾಂಕ ಗೊತ್ತುಪಡಿಸಿರುವುದನ್ನು ಪರಿಗಣಿಸಬೇಕು. ಹಾಗೆಯೇ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಂಜೂರು ಮಾಡಿದ ಅಲ್ಪಾವಧಿಯ ಮುಂಗಡಗಳಿಗೆ ಖರ್ಚು ಹಾಕಿದ ಬಡ್ಡಿಯೂ, ಅಂತಹ ಮುಂಗಡಗಳ ಅಸಲು ಮೊತ್ತವನ್ನು ಮೀರಿರಬಾರದು.

2.11 ಬಹುಕಾಲ ಬಾಳಿಕೆ ವಸ್ತುಗಳಿಗೆ ಪ್ರತಿ ಶತ ಶೂನ್ಯ ಬಡ್ಡಿ ಹಣಕಾಸು ಯೋಜನೆಗಳು

2.11.1 ಬ್ಯಾಂಕುಗಳು, ಗ್ರಾಹಕ ವಸ್ತುಗಳ ತಯಾರಕರಿಂದ / ದಲ್ಲಾಳಿಗಳಿಂದ ಲಭ್ಯವಾಗುವ ರಿಯಾಯಿತಿಯ ಮೂಲಕ ಸಾಲಗಾರರಿಗೆ ಬಹುಕಾಲ ಬಾಳಿಕೆ ಬರುವ ವಸ್ತುಗಳ ಮೇಲೆ ಪ್ರತಿಶತ ಕಡಿಮೆ/ಶೂನ್ಯ

ಬಡ್ಡಿದರಗಳಲ್ಲಿ ಮುಂಗಡ ನೀಡುವುದರಿಂದ ದೂರ ಉಳಿಯಬೇಕು. ಏಕೆಂದರೆ ಈ ಸಾಲದ ಯೋಜನೆಗಳು, ಕಾರ್ಯ ನಿರ್ವಹಣೆಯಲ್ಲಿ ಪಾರದರ್ಶಕತೆಯ ಕೊರತೆ ಮತ್ತು ಸಾಲ ಉತ್ಪನ್ನಗಳ ಅಸಮರ್ಪಕ ಬೆಲೆ ನಿರ್ಧಾರದ ವಿಧಾನಗಳನ್ನು ಹೊಂದಿವೆ. ಈ ಉತ್ಪನ್ನಗಳು ಗ್ರಾಹಕರಿಗೆ ಅನ್ವಯವಾಗುವ ಬಡ್ಡಿದರಗಳ ಕುರಿತು ಸ್ಪಷ್ಟ ಚಿತ್ರಣವನ್ನೂ ಕೂಡಾ ನೀಡುವುದಿಲ್ಲ. ಈ ಯೋಜನೆಗಳಡಿಯಲ್ಲಿ ಗ್ರಾಹಕರನ್ನು ಪ್ರೋತ್ಸಾಹಿಸುವ/ಹಣಕಾಸು ಒದಗಿಸುವ ಸೂಚನೆಗಳನ್ನು ಬೇರೆ ಬೇರೆ ವೃತ್ತ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸುವುದರ ಮೂಲಕ, ಬ್ಯಾಂಕುಗಳು ಮಾಡಬಾರದು. ಬಡ್ಡಿ ದರಗಳ ಕುರಿತು ಯಾವುದೇ ರೀತಿಯ ಸ್ಪಷ್ಟತೆಯಿಲ್ಲದ, ಪ್ರೋತ್ಸಾಹಾಧಾರಿತ ಜಾಹಿರಾತುಗಳೊಂದಿಗೆ ಯಾವುದೇ ನಮೂನೆ/ರೀತಿಯಲ್ಲಿ ತಮ್ಮ ಹೆಸರುಗಳನ್ನು ತಳಕು ಹಾಕಿಕೊಳ್ಳುವುದರಿಂದ ಬ್ಯಾಂಕುಗಳು ದೂರವಿರಬೇಕು.

2.12 ಬ್ಯಾಂಕುಗಳು ಹೆಚ್ಚುವರಿ ಬಡ್ಡಿ ವಿಧಿಸುವುದು

2.12.1 ಬಡ್ಡಿ ದರಗಳನ್ನು ನಿಯಂತ್ರಣಮುಕ್ತಗೊಳಿಸಿದ್ದರೂ, ಒಂದು ನಿಶ್ಚಿತ ಮಟ್ಟದ ನಂತರ ಬಡ್ಡಿ ವಿಧಿಸುವುದು, ದುಬಾರಿ ಬಡ್ಡಿಯ ಸಾಲವಾಗಿ ಪರ್ಯಾವಸಾನವಾಗುತ್ತದೆ ಮತ್ತು ಇದು ಹೆಚ್ಚು ಕಾಲ ಬಾಳುವಂತಹುದೂ ಅಲ್ಲ; ಸಾಮಾನ್ಯ ಬ್ಯಾಂಕಿಂಗ್ ಪದ್ಧತಿಗೆ ಸರಿಹೊಂದುವಂತಹುದೂ ಅಲ್ಲ. ಈ ಕಾರಣದಿಂದ ಬ್ಯಾಂಕಿನ ಮಂಡಳಿಗಳು, ಬ್ಯಾಂಕುಗಳು ಸಾಲ ಮತ್ತು ಮುಂಗಡಗಳ ಮೇಲೆ ಸಂಸ್ಕರಣ ಮತ್ತು ಇತರ ಶುಲ್ಕಗಳನ್ನೊಳಗೊಂಡ ದುಬಾರಿ ಬಡ್ಡಿ ಹೇರುವಂತಾಗದಿರಲು, ಸೂಕ್ತವಾದ ಆಂತರಿಕ ಸೂತ್ರಗಳನ್ನು ಮತ್ತು ವಿಧಾನಗಳನ್ನು ರೂಪಿಸಿಕೊಳ್ಳಲು ಸೂಚಿಸಲಾಗಿದೆ. ಈ ರೀತಿಯ ಸೂತ್ರ ಮತ್ತು ವಿಧಾನಗಳನ್ನು ನಿರೂಪಿಸುವಾಗ ಸಣ್ಣ ಮೌಲ್ಯದ ಸಾಲಗಳಿಗೆ ಸಂಬಂಧಪಟ್ಟಂತೆ, ವಿಶೇಷವಾಗಿ ವೈಯ್ಯಕ್ತಿಕ ಸಾಲಗಳು ಮತ್ತು ಇದೇ ರೀತಿ ಲಕ್ಷಣಗಳುಳ್ಳ ಇತರ ಸಾಲಗಳಿಗೆ, ಬ್ಯಾಂಕುಗಳು ಇತರ ವಿಷಯಗಳೊಂದಿಗೆ ಕೆಳಕಂಡ ವಿಸ್ತಾರವಾದ ಮಾರ್ಗ ಸೂಚಿಗಳನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು;

- ಇಂತಹ ಸಾಲಗಳನ್ನು ಮಂಜೂರು ಮಾಡುವಾಗ, ಇತರ ಅರ್ಹತೆಗಳೊಂದಿಗೆ ಭಾವೀ ಸಾಲಗಾರನ ಹಣದ ಹರಿವುಗಳನ್ನು ಪರಿಗಣಿಸುವಂತಹ ಸೂಕ್ತವಾದ ಪೂರ್ವಾನುಮತಿಯ ಪ್ರಕ್ರಿಯೆಯನ್ನು ಗೊತ್ತುಮಾಡಬೇಕು.
- ಬ್ಯಾಂಕುಗಳಿಂದ ವಿಧಿಸಲ್ಪಡುವ ಬಡ್ಡಿದರವು, ಇತರ ಅರ್ಹತೆಗಳೂ ಸೇರಿದಂತೆ ಸಾಲಗಾರನ ಆಂತರಿಕ ಅರ್ಹತೆಗೆ ಸಂಬಂಧಪಟ್ಟಂತೆ, ಸಕಾರಣಾತ್ಮಕ ಮತ್ತು ನ್ಯಾಯಯುತ ಎಂದು ಪರಿಗಣಿತವಾಗಿರುವ ಸಂಭಾವ್ಯ ನಷ್ಟದ ಪ್ರೀಮಿಯಮ್‌ನ್ನು ಸೇರಿಸಿಕೊಂಡಿರಬೇಕು.

  ಹಾಗೆಯೇ, ಸಂಭಾವ್ಯ ನಷ್ಟದ ಪ್ರಶ್ನೆಯನ್ನು ಪರಿಗಣಿಸುವಲ್ಲಿ, ಖಾತರಿಯ ಇರುವಿಕೆ ಅಥವಾ ಇರದಿರುವಿಕೆ ಮತ್ತು ಇವುಗಳ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳಬೇಕು.
- ಪಾವತಿಮಾಡುವ ಪ್ರಯತ್ನವುಳ್ಳ ಮತ್ತು ವಹಿವಾಟುಗಳಿಂದ ಬರಬಹುದಾದ ಪ್ರತಿಫಲವನ್ನು ಸಕಾರಣಾತ್ಮಕವಾಗಿ ನಿರೀಕ್ಷಿಸಬಹುದಾದ ಸಾಲವನ್ನು ಸಾಲ ವಿತರಿಸುವ ಬ್ಯಾಂಕಿನಿಂದ ಭರಿಸಬೇಕಾದ ಒಟ್ಟಾರೆ ವೆಚ್ಚಕ್ಕೆ ಸಂಬಂಧಪಟ್ಟಂತೆ, ಸಾಲದ ಮೇಲೆ ವಿಧಿಸುವ ಬಡ್ಡಿ ಮತ್ತು ಇನ್ನಿತರ ಎಲ್ಲಾ ವೆಚ್ಚಗಳನ್ನೊಳಗೊಂಡು ಸಾಲಗಾರರಿಗೆ ಆಗುವ ಒಟ್ಟು ವೆಚ್ಚವು ನ್ಯಾಯಯುತವಾಗಿರಬೇಕು.

- ಇಂತಹ ಸಾಲಗಳ ಮೇಲೆ ವಿಧಿಸಿರುವ ಸಂಸ್ಕರಣೆ ಮತ್ತು ಇತರ ವೆಚ್ಚಗಳನ್ನೊಳಗೊಂಡು, ಬಡ್ಡಿಯ ಮೇಲೆ ಸೂಕ್ತ ಮಿತಿಯನ್ನು ಗೊತ್ತುಪಡಿಸಬೇಕು ಮತ್ತು ಇವುಗಳನ್ನು ಯಥೋಚಿತವಾಗಿ ಪ್ರಕಟಿಸಬೇಕು.

ಅನುಬಂಧ – 1

ವಾಣಿಜ್ಯ ಬ್ಯಾಂಕುಗಳ ಸಾವಧಿ ಸಾಲಗಳನ್ನೊಳಗೊಂಡ ಎಲ್ಲ ರೂಪಾಯಿ ಮುಂಗಡಗಳಿಗೆ ಬಡ್ಡಿದರದ ಸ್ವರೂಪ (ಪ್ರತಿಶತ ವಾರ್ಷಿಕ)

1.	(ಎ) ರೂ.2 ಲಕ್ಷದವರೆಗೆ ಮತ್ತು ರೂ.2 ಲಕ್ಷವನ್ನು ಒಳಗೊಂಡಂತೆ	ಪ್ರಧಾನ ಸಾಲ ನೀಡಿಕೆ ದರ ಮಾನದಂಡವನ್ನು ಮೀರದಂತೆ
	(ಬಿ) ರೂ.2 ಲಕ್ಷಕ್ಕೆ ಮೇಲ್ಪಟ್ಟು	ಬಿಪಿಎಲ್‌ಆರ್ ಮತ್ತು ವ್ಯಾಪ್ತಿಯ ಮಾರ್ಗಸೂಚಿಗಳಿಗೆ ಒಳಪಟ್ಟು, ಬಡ್ಡಿ ದರ ನಿರ್ಧರಿಸಲು ಬ್ಯಾಂಕುಗಳು ಸ್ವತಂತ್ರವಾಗಿವೆ. ಆದಾಗ್ಯೂ, ಬ್ಯಾಂಕುಗಳು ಪಾರದರ್ಶಕ ಮತ್ತು ತಮ್ಮ ಮಂಡಳಿಯ ಒಪ್ಪಿತ ಧ್ಯೇಯ ಧೋರಣೆಗಳಿಗನುಗುಣವಾಗಿ ಅನುಮೋದನೆಯ ಗುರಿಯ ನೀತಿಗೆ ಅಧಾರಿತವಾಗಿ ರಫ್ತುದಾರರಿಗೆ ಅಥವಾ ಸಾರ್ವಜನಿಕ ಉದ್ದಿಮೆದಾರರೂ ಸೇರಿದಂತೆ ವಿಶ್ವಾಸಾರ್ಹ ಗ್ರಾಹಕರಿಗೆ ಬಿಪಿಎಲ್‌ಆರ್‌ಗಿಂತ ಕಡಿಮೆ ದರದಲ್ಲಿ ಸಾಲ ನೀಡಬಹುದು.
2.	ರಫ್ತು ಉದ್ದರಿ	**ಅಕ್ಟೋಬರ್ 31, 2007ರ ಅವಧಿಯವರೆಗೆ ಅನ್ವಯ**
	(1) ರವಾನೆ ಪೂರ್ವ ಉದ್ದರಿ (ಎ) 180 ದಿನಗಳ ವರೆಗೆ	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ ಪಾಯಿಂಟುಗಳನ್ನು ಕಡಿಮೆ ಮಾಡುವುದು
	(ಬಿ) ಇಸಿಜಿಸಿ ಗ್ಯಾರಂಟಿಗಳಡಿಯಲ್ಲಿ ಸರ್ಕಾರದಿಂದ ದೊರೆಯುವ ಪ್ರೋತ್ಸಾಹಿಗಳಿಗೆ ಅನುಗುಣವಾಗಿ (90 ದಿನಗಳ ವರೆಗೆ)	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ ಪಾಯಿಂಟುಗಳನ್ನು ಕಡಿಮೆ ಮಾಡುವುದು
3.	ರವಾನೆ ನಂತರದ ಉದ್ದರಿ	
	(ಎ) ರವಾನೆ ಅವಧಿಯ ಬೇಡಿಕೆ ಹುಂಡಿಗಳ ಮೇಲೆ (ಎಫ್‌ಇಡಿಎಐ ಸೂಚಿಸಿದಂತೆ)	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ ಪಾಯಿಂಟುಗಳನ್ನು ಕಡಿಮೆ ಮಾಡುವುದು
	(ಬಿ)ಸಾವಧಿ ಹುಂಡಿಗಳು (ಯೂಸೆನ್ಸ್ ಬಿಲ್ಲುಗಳು)(ಎಫ್‌ಇಡಿಎಐ ಸೂಚಿಸಿದಂತೆ ಸಾವಧಿ ಒಳಗೊಂಡು ರಫ್ತು ಹುಂಡಿಗಳ ಒಟ್ಟು ಅವಧಿ, ಸಾಗಣೆ ಅವಧಿ ಮತ್ತು ಅನ್ವಯವಾಗುವಲ್ಲಿ ರಿಯಾಯಿತಿ ಅವಧಿ	
	(i) 90 ದಿನಗಳವರೆಗೆ	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ

		ಪಾಯಿಂಟುಗಳನ್ನು ಕಡಿಮೆ ಮಾಡುವುದು
	(ii) ಸ್ವರ್ಣ ಕಾರ್ಡು ಯೋಜನೆಯಡಿಯಲ್ಲಿ ಅರ್ಹ ರಫ್ತುದಾರರಿಗೆ 365 ದಿನಗಳವರೆಗೆ	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ ಪಾಯಿಂಟುಗಳನ್ನು ಕಡಿಮೆ ಮಾಡುವುದು
	(ಸಿ) ಸರ್ಕಾರದಿಂದ ಪಡೆಯಬಹುದಾದ ಪ್ರೋತ್ಸಾಹಗಳಿಗೆ ಅನುಗುಣವಾಗಿ (ಇಸಿಜಿಸಿ ಗ್ಯಾರಂಟಿ ಒಳಗೊಂಡು) 90 ದಿನಗಳವರೆಗೆ	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ ಪಾಯಿಂಟುಗಳನ್ನು ಕಡಿಮೆ ಮಾಡುವುದು
	(ಡಿ) ಹಿಂತೆಗೆಯದ ಶಿಲ್ಕುಗಳ ಮೇಲೆ (90 ದಿನಗಳವರೆಗೆ)	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ ಪಾಯಿಂಟುಗಳನ್ನು ಕಡಿಮೆ ಮಾಡುವುದು
	(ಇ) ಸರಕು ರವಾನೆಯಾದ ಒಂದು ವರ್ಷದ ಒಳಗೆ ಸಂದಾಯ ಮಾಡಬೇಕಾದ ಕಾಯ್ದಿರಿಸಿಕೊಂಡ ಹಣದಮೇಲೆ(ಪೂರೈಕೆ ಮಾಡಿದ ಭಾಗಕ್ಕೆ ಮಾತ್ರ) (90 ದಿನಗಳವರೆಗೆ)	ಬಿಪಿಎಲ್‌ಆರ್ ಮೀರದಂತೆ 2.5 ಪ್ರತಿಶತ ಪಾಯಿಂಟುಗಳನ್ನು ಕಡಿಮೆ ಮಾಡುವುದು

ಟಿಪ್ಪಣಿ :

1. ಇವು ದರದ ಮಿತಿಗಳಾಗಿರುವುದರಿಂದ, ಈ ದರಗಳಿಗಿಂತ ಕಡಿಮೆ ದರ ವಿಧಿಸಲು ಬ್ಯಾಂಕುಗಳು ಸ್ವತಂತ್ರವಾಗಿವೆ.
2. ಮೇಲೆ ಸೂಚಿಸಿದಂತೆ ಅವಧಿಯ ನಂತರ, ಮೇಲೆ ಗುರುತಿಸಿದ ವರ್ಗಗಳ ರಫ್ತು ಉದ್ದರಿಯ ಮೇಲಿನ ಬಡ್ಡಿದರಗಳು ನಿಯಂತ್ರಣಕ್ಕೊಳಪಡುವುದಿಲ್ಲ ಮತ್ತು ಬ್ಯಾಂಕುಗಳು, ಬಿಪಿಎಲ್‌ಆರ್ ಮತ್ತು ವಿಸ್ತರದ ಬಗ್ಗೆ ಮಾರ್ಗದರ್ಶನಗಳನ್ನು ಗಮನದಲ್ಲಿಟ್ಟುಕೊಂಡು, ಬಡ್ಡಿದರವನ್ನು ನಿರ್ಧರಿಸಲು ಸ್ವತಂತ್ರವಾಗಿವೆ.
3. ಶಿಕ್ಷಣ ಸಾಲ ಯೋಜನೆ

ರೂ. 4 ಲಕ್ಷದವರೆಗೆ	ಬಿಪಿಎಲ್‌ಆರ್ ಮೀರದಂತೆ
ರೂ. 4 ಲಕ್ಷಕ್ಕೆ ಮೇಲ್ಪಟ್ಟು	ಬಿಪಿಎಲ್‌ಆರ್ + 1%

ಟಿಪ್ಪಣಿ :

1. ಮರುಪಾವತಿಯ ಬಿಡುವು/ಸ್ಥಗಿತಗೊಳಿಸುವಿಕೆಯ ಅವಧಿಯಲ್ಲಿ, ಬಡ್ಡಿಯನ್ನು ತ್ರೈಮಾಸಿಕ/ಅರ್ಧ ವರ್ಷಕ್ಕೆ ಸರಳ ಆಧಾರದಲ್ಲಿ ಖರ್ಚುಹಾಕಬೇಕು.
2. ರೂ. 2 ಲಕ್ಷಕ್ಕೆ ಮೇಲ್ಪಟ್ಟ ಅವಧಿ ಮೀರಿದ ಮೊತ್ತ ಮತ್ತು ಬಾಕಿಯಾದ ಅವಧಿಯ ಸಾಲಕ್ಕೆ ಪ್ರತಿಶತ 2ರ ದಂಡ ಬಡ್ಡಿಯನ್ನು ವಿಧಿಸಬೇಕು.

4. ಡಿಆರ್‌ಐ ಮುಂಗಡಗಳಿಗೆ ಪ್ರತಿಶತ 4ರಂತೆ

5. ಈ ಕೆಳಗಿನ ಸಾಲಗಳಿಗೆ ಸಂಬಂಧಪಟ್ಟಂತೆ, ಸಾಲದ ಮೊತ್ತ ಮತ್ತು ಬಿಪಿಎಲ್‌ಆರ್ ಪರಿಗಣಿಸದೇ ಬಡ್ಡಿದರ ನಿರ್ಧರಿಸಲು ಬ್ಯಾಂಕುಗಳು ಸ್ವತಂತ್ರವಾಗಿವೆ.

(ಎ) ಬಹುಬಾಳಿಕೆಯ ಗ್ರಾಹಕ ವಸ್ತುಗಳ ಖರೀದಿಗೆ ಸಾಲಗಳು

(ಬಿ) ಷೇರುಗಳು ಮತ್ತು ಡಿಬೆಂಚರುಗಳು/ಬಾಂಡುಗಳ ಮೇಲೆ ವ್ಯಕ್ತಿಗಳಿಗೆ ಸಾಲಗಳು

(ಸಿ) ಕ್ರೆಡಿಟ್ ಕಾರ್ಡ್ ಬಾಕಿಗಳೂ ಒಳಗೊಂಡಂತೆ ಇತರ ಆದ್ಯತಾರಹಿತ ವಲಯದ ವೈಯಕ್ತಿಕ ಸಾಲಗಳು

(ಡಿ) ಬ್ಯಾಂಕುಗಳಲ್ಲಿರುವ ದೇಶಿಯ/ಎನ್‌ಆರ್‌ಇ/ಎಫ್‌ಸಿಎನ್‌ಆರ್(ಬಿ) ಠೇವಣಿಗಳ ಮೇಲಿನ ಮುಂಗಡಗಳು/ಓವರ್‌ಡ್ರಾಫ್ಟ್‌ಗಳು; ಈ ಠೇವಣಿಗಳು ಸಾಲಗಾರನ ಸ್ವಂತ/ಸಾಲಗಾರರ ಒಟ್ಟಾರೆ ಹೆಸರಿನಲ್ಲಿ/ಗಳಲ್ಲಿ ಅಥವಾ ಜಂಟಿಯಾಗಿ ಬೇರೆ ವ್ಯಕ್ತಿಯ ಜೊತೆಯಲ್ಲಿ ಇರಬೇಕು.

(ಇ) ಮಧ್ಯವರ್ತಿ ದಲ್ಲಾಳಿಗಳಿಗೆ (ಗೃಹ ನಿರ್ಮಾಣ ಹೊರತುಪಡಿಸಿ) ಹುಟ್ಟುವಳಿ ಬೆಂಬಲ ಒದಗಿಸುತ್ತಿರುವ ಅಂತಿಮ ಫಲಾನುಭವಿಗಳಿಗೆ ಮತ್ತು ದಳ್ಳಾಳಿಗಳಿಗೆ ಮರು ಸಾಲನೀಡಿಕೆ ಸಲುವಾಗಿ ಹಣಕಾಸು ಮಂಜೂರು ಮಾಡಿರುವುದು.

(ಎಫ್) ಗೃಹನಿರ್ಮಾಣ ಮಧ್ಯವರ್ತಿ ದಲ್ಲಾಳಿಗಳಿಗೆ, ಅಂತಿಮ ಫಲಾನುಭವಿಗಳಿಗೆ ಸಾಲ ನೀಡುವಸಲುವಾಗಿ, ಹಣಕಾಸು ಮಂಜೂರು ಮಾಡಿರುವುದು.

(ಜಿ) ಹುಂಡಿಗಳ ಸೋಡಿ ಮಾಡುವುದು (ಬಿಲ್ ಡಿಸ್ಕೌಂಟಿಂಗ್)

(ಎಚ್) ಆಯ್ದ ಉದ್ದರಿ ನಿಯಂತ್ರಣಗಳಿಗೆ ಒಳಪಟ್ಟ ವಸ್ತುಗಳಿಗೆ ಸಾಲಗಳು/ಮುಂಗಡಗಳು/ನಗದು ಉದ್ದರಿ/ಓವರ್‌ಡ್ರಾಫ್ಟ್‌ಗಳು

6.	ಸಾವಧಿ ಸಾಲ ನೀಡಿಕೆ ಸಂಸ್ಥೆಗಳ ಮರುಹಣಕಾಸು ನೀಡಿಕೆ ಯೋಜನೆಗಳಲ್ಲಿ ಭಾಗವಹಿಸುವಿಕೆಗೆ ಒಳಪಡುವ ಸಾಲಗಳು	ಹಣಕಾಸು ನೀಡಿಕೆ ಸಂಸ್ಥೆಗಳ ಒಪ್ಪಂದದಂತೆ, ಬಿಪಿಎಲ್‌ಆರ್‌ನ್ನು ಪರಿಗಣಿಸದೇ ಸಾಲ ನೀಡಿಕೆ ದರ ವಿಧಿಸಲು ಸ್ವತಂತ್ರವಾಗಿವೆ

ಟಿಪ್ಪಣಿ : ಮಧ್ಯವರ್ತಿ ದಲ್ಲಾಳಿಗಳನ್ನು ಅನುಬಂಧ 2ರಲ್ಲಿ ನಮೂದಿಸಲಾಗಿದೆ.

ಅನುಬಂಧ – 2

ಮಧ್ಯವರ್ತಿ ದಲ್ಲಾಳಿಗಳ ವಿವರ ಪಟ್ಟಿ

1. ದುರ್ಬಲ ವರ್ಗದವರಿಗೆ ಮರುಸಾಲ ನೀಡಿಕೆ ಮಾಡುವ ಸರ್ಕಾರಿ ಪ್ರಾಯೋಜಿತ ಸಂಸ್ಥೆಗಳು. ದುರ್ಬಲ ವರ್ಗದವರಲ್ಲಿ ಈ ಕೆಳಗಿನವರು ಸೇರ್ಪಡೆಯಾಗುತ್ತಾರೆ.

(i) 5 ಎಕರೆ ಅಥವಾ ಅದಕ್ಕೂ ಕಡಿಮೆ ಭೂಮಿ ಹೊಂದಿರುವ ಸಣ್ಣ ಮತ್ತು ಅತೀ ಸಣ್ಣ ರೈತರು ಮತ್ತು ಭೂರಹಿತ ಕಾರ್ಮಿಕರು, ಗೇಣಿದಾರ ರೈತರು ಮತ್ತು ಬೆಳೆ ಪಾಲುದಾರರು;

(ii) ರೂ.50000/– ವೈಯಕ್ತಿಕ ಸಾಲ ಬೇಡಿಕೆ ಮೀರದ ಕುಶಲಕರ್ಮಿಗಳು, ಗ್ರಾಮೀಣ ಮತ್ತು ಗುಡಿಕೈಗಾರಿಕೆಗಳು;

(iii) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ (ಎಸ್‌ಜಿಎಸ್‌ವೈ) ಫಲಾನುಭವಿಗಳು;

(iv) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು;

(v) ವಿಭಿನ್ನ ಬಡ್ಡಿದರ (ಡಿಆರ್‌ಐ) ಯೋಜನೆಯ ಫಲಾನುಭವಿಗಳು;

(vi) ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ (ಎಸ್‌ಜೆಎಸ್‌ಆರ್‌ವೈ)ಯಡಿಯಲ್ಲಿಯ ಫಲಾನುಭವಿಗಳು;

(vii) ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆಗಳಡಿಯ ಫಲಾನುಭವಿಗಳು;(ಎಸ್.ಎಲ್.ಆರ್.ಎಸ್);

(viii) ಸ್ವಸಹಾಯ ಗುಂಪುಗಳಿಗೆ (ಎಸ್‌ಎಚ್‌ಜಿಗಳು) ಮುಂಗಡಗಳು;

(ix) ಸೂಕ್ತ ಸಹ ಅಥವಾ ಗುಂಪು ಭದ್ರತೆ ಆಧಾರದ ಮೇಲೆ ಸಂಕಷ್ಟದಲ್ಲಿರುವ ಬಡವರಿಗೆ ಅನೌಪಚಾರಿಕ ವಲಯದ ತಮ್ಮ ಸಾಲವನ್ನು ಮರುಪಾವತಿಸಲು ನೀಡಿದ ಸಾಲಗಳು;

ಮೇಲಿನ (i) ರಿಂದ (viii)ರ ಅಡಿಯಲ್ಲಿ, ಕಾಲಕಾಲಕ್ಕೆ ಭಾರತ ಸರ್ಕಾರವು ಅಧಿಸೂಚಿಸಬಹುದಾದ ಅಲ್ಪ ಸಂಖ್ಯಾತ ಸಮುದಾಯದ ವ್ಯಕ್ತಿಗಳಿಗೆ ನೀಡಿದ ಸಾಲ.

ರಾಜ್ಯಗಳಲ್ಲಿ, ಅಧಿಸೂಚಿಸಿದ ಒಂದು ಅಲ್ಪ ಸಂಖ್ಯಾತ ಸಮುದಾಯ ಬಹುಸಂಖ್ಯಾತ ವರ್ಗದಲ್ಲಿ ಬರುತ್ತಿದ್ದರೆ, (ix) ವಿಭಾಗ ಇತರ ಅಧಿಸೂಚಿತ ಅಲ್ಪ ಸಂಖ್ಯಾತರನ್ನು ಮಾತ್ರ ಒಳಗೊಂಡಿರುತ್ತದೆ. ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಸಿಕ್ಕಿಮ್, ಮಿಜೋರಮ್, ನಾಗಾಲ್ಯಾಂಡ್ ಮತ್ತು ಲಕ್ಷದ್ವೀಪ; ಇವು ಇಂತಹ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಾಗಿವೆ.

2. ಕೃಷಿ ಮೂಲವಸ್ತು/ಸಲಕರಣೆಗಳ ಹಂಚಿಕೆದಾರರು.
3. ದುರ್ಬಲ ವರ್ಗದವರಿಗೆ, ರಾಜ್ಯ ಹಣಕಾಸು ಸಂಸ್ಥೆಗಳು (ಎಸ್‌ಎಫ್‌ಸಿಗಳು)/ರಾಜ್ಯ ಔದ್ಯೋಗಿಕ ಅಭಿವೃದ್ಧಿ ಸಂಸ್ಥೆಗಳು (ಎಸ್‌ಐಡಿಸಿಗಳು) ನೀಡಿರುವ ಉದ್ದರಿ ವ್ಯಾಪ್ತಿಯವರೆಗೆ.
4. ರಾಷ್ಟ್ರೀಯ ಸಣ್ಣ ಔದ್ಯೋಗಿಕ ಸಂಸ್ಥೆ (ಎನ್‌ಎಸ್‌ಐಸಿ).
5. ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಮಂಡಳಿ (ಕೆವಿಐಸಿ).
6. ವಿಕೇಂದ್ರೀಕೃತ ವಲಯಕ್ಕೆ ಸಹಾಯ ಒದಗಿಸುವಲ್ಲಿ ತೊಡಗಿಕೊಂಡಿರುವ ದಲ್ಲಾಳಿಗಳು.
7. ದುರ್ಬಲ ವರ್ಗದವರಿಗೆ ಮರು ಸಾಲ ನೀಡಿಕೆ ಮಾಡುವ ಸರ್ಕಾರಿ ಪ್ರಾಯೋಜಿತ ಸಂಸ್ಥೆಗಳು.
8. ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಸಂಸ್ಥೆ ನಿಯಮಿತ (ಹೆಚ್‌ಯುಡಿಸಿಒ)
9. ಮರು ಹಣಕಾಸು ಸೌಲಭ್ಯಕ್ಕಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ (ಎನ್‌ಹೆಚ್‌ಬಿ) ಅನುಮೋದಿಸಿರುವ ಗೃಹ ನಿರ್ಮಾಣ ಹಣಕಾಸು ಕಂಪೆನಿಗಳು.
10. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗಾಗಿ ಇರುವ ಸರ್ಕಾರಿ ಪ್ರಾಯೋಜಿತ ಸಂಸ್ಥೆಗಳು (ಮೂಲ ವಸ್ತುಗಳ ಖರೀದಿ ಮತ್ತು ಪೂರೈಕೆ ಮತ್ತು/ಅಥವಾ ಈ ಸಂಸ್ಥೆಗಳ ಫಲಾನುಭವಿ ಉತ್ಪನ್ನಗಳ ಮಾರಾಟ ವ್ಯವಸ್ಥೆ).
11. ಸ್ವಸಹಾಯ ಗುಂಪುಗಳಿಗೆ (ಎಸ್‌ಎಚ್‌ಜಿಗಳು) ಕಿರು ಹಣಕಾಸು ಸಂಸ್ಥೆಗಳು/ಸರ್ಕಾರೇತರ ಸಂಸ್ಥೆಗಳ ಮರು ಸಾಲ ನೀಡಿಕೆ.

ಅನುಬಂಧ – 3

"ಮುಂಗಡಗಳ ಮೇಲೆ ಬಡ್ಡಿದರಗಳು" ಬಗೆಗಿನ ಪ್ರಧಾನ ಸುತ್ತೋಲೆಯಲ್ಲಿ ಕ್ರೋಢೀಕರಿಸಲಾದ ನಿರ್ದೇಶನ/ಸುತ್ತೋಲೆ/ಸೂಚನೆಗಳ ಪಟ್ಟಿ

ಕ್ರಮ ಸಂಖ್ಯೆ	ಉಲ್ಲೇಖ ಸಂಖ್ಯೆ	ದಿನಾಂಕ
1	ಡಿಬಿಓಡಿ.ಡಿಐಆರ್.ಬಿಸಿ.93/13.03.00/2006–07	07.05.2007
2	ಆರ್‌ಪಿಸಿಡಿ.ಸಂ.ಪಿಎಲ್‌ಎಎನ್.ಬಿಸಿ.10856/04.09.01/2006–07	18.05.2007
3	ಆರ್‌ಪಿಸಿಡಿ.ಸಂ.ಪಿಎಲ್‌ಎಎನ್.ಬಿಸಿ.84/04.09.01/2006–07	30.04.2007
4	ಡಿಬಿಓಡಿ.ಡಿಐಆರ್.(ಇಎಕ್ಸ್‌ಪಿ.)ಬಿಸಿ.79/04.02.01/2006–07	17.04.2007
5	ಡಿಬಿಓಡಿ.ಡಿಐಆರ್.ಬಿಸಿ.5/13.03.00/2006–07	01.07.2006